

ಕಿನಾರೆಯಲ್ಲಿ ಭಾರೀ ಪ್ರಮಾಣದ ಅಲೆಗಳು ದಡಕ್ಕೆ ಅಪ್ಪಳಿಸುವುದರಿಂದ ಜಲ ಕ್ರೀಡೆಗಳನ್ನು ನಿಷೇಧಿಸಲಾಗಿದೆ.

ಸಿಂಧುದುರ್ಗದ ಬಳಿಯಿರುವ ಇನ್ನೊಂದು ಕಡಲ ಕಿನಾರೆ ಎಂದರೆ ತರ್ಕಾಲಿ ಬೀಚ್. ಇದು ಕೂಡಾ ದೊಡ್ಡ ಪ್ರವಾಸಿ ಆಕರ್ಷಣೆ. ಈ ಕಡಲಕಿನಾರೆಯ ವಿಶೇಷತೆಯೇನೆಂದರೆ, ಇಲ್ಲಿನ ಮರಳು ಬಿಳಿ ಬಣ್ಣದ್ದಾಗಿದ್ದು, ಹೆಣ್ಣು ಆಮೆಗಳ ಆವಾಸಸ್ಥಾನವಾಗಿದೆ. ಇಲ್ಲಿ ಆಮೆಗಳ ಮೊಟ್ಟೆಗಳೂ ಕಾಣಸಿಗುತ್ತವೆ. ಮೊಟ್ಟೆಯಿಂದ ಆಮೆ ಮರಿಗಳು ಹೊರಬರುವ ದೃಶ್ಯವನ್ನೂ ನೋಡಬಹುದು. ಈ ಕಡಲ ಕಿನಾರೆ ಸಾಕಷ್ಟು ಉದ್ದವಾಗಿರುವುದರಿಂದ ಮರಳಿನಲ್ಲಿ ಕಾಲಿಗಪ್ಪಳಿಸುವ ಅಲೆಗಳ ಮಧ್ಯೆ ನಡೆದು ಹೋಗುವುದೇ ಒಂದು ವಿಶಿಷ್ಟ ಅನುಭವ.

ವಯಾಗಣಿ ಬೀಚ್ ಕೂಡಾ ಇಲ್ಲಿ ಸಾಕಷ್ಟು ಹೆಸರುವಾಸಿ. ಈ ಬೀಚ್ ಪ್ರವಾಸಿಗರಿಗೆ ಅಚ್ಚುಮೆಚ್ಚು. ಇದಕ್ಕೆ ಸಾಕಷ್ಟು ಕಾರಣಗಳಿವೆ. ಮೊದಲನೆಯದಾಗಿ ಇದರ ಕಡಲ ತಡಿಯಲ್ಲಿ ಸಾಲು ಸಾಲಾಗಿ ಹಲಸಿನ ಮರಗಳು, ಮಾವಿನ ಮರಗಳು, ಗೋಡಂಬಿ ಮರಗಳಿದ್ದು ತಂಪಾದ ವಾತಾವರಣ ಮನಸ್ಸಿಗೆ ಮುದ ನೀಡುತ್ತದೆ. ಇದರ ಜೊತೆಗೆ ಅಲ್ಲಿಯೇ ಸಿಗುವ ತಂಪಾದ ಎಳನೀರನ್ನು ಕುಡಿಯುತ್ತಾ ಸೂರ್ಯಾಸ್ತದ ದೃಶ್ಯವನ್ನು ನೋಡಲೆಂದೇ ಸಾಕಷ್ಟು ಪ್ರವಾಸಿಗರು ಇಲ್ಲಿ ಬಂದು ಸೇರುತ್ತಾರೆ. ಕಡಲ ತೀರದಲ್ಲಿರುವ ಸ್ಟಾಲ್‌ಗಳಲ್ಲಿ ಅಲ್ಲಿನ ಮಾಲ್ವಾನಿ ಖಾದ್ಯಗಳನ್ನು ಸವಿಯುವ ಅವಕಾಶವೂ ಇಲ್ಲಿದೆ. ಮೀನು ಮತ್ತು ಸಿಗಡಿಗಳಿಂದ ತಯಾರಿಸಿದ ಮತ್ಸ್ಯಾಹಾರ ತಿನ್ನಲು ಬರುವವರದ್ದೇ ದೊಡ್ಡ ಗುಂಪಿದೆ.

ಸಿಂಧುದುರ್ಗ ಹತ್ತಿರದಲ್ಲಿರುವ ಸಾಗರೇಶ್ವರ ಶಿವ ದೇವಾಲಯ ಪ್ರಮುಖ ಧಾರ್ಮಿಕ ಕೇಂದ್ರವಾಗಿದ್ದು ವರ್ಷಪೂರ್ತಿ ಸಾಕಷ್ಟು ಯಾತ್ರಾರ್ಥಿಗಳನ್ನು ಆಕರ್ಷಿಸುತ್ತಿದೆ. ಅತ್ಯಂತ ಪುರಾತನವಾದ ಈ ಶಿವಮಂದಿರ ಸಂಪೂರ್ಣವಾಗಿ ನೀರಿನ ಮಧ್ಯೆ ಇದೆ. ಅತ್ಯಂತ ಕಲಾತ್ಮಕವಾಗಿ ನಿರ್ಮಿಸಲಾದ ಈ ದೇವಾಲಯದ ಮೆಟ್ಟಿಲಿಗೆ ಅಲೆಗಳು ಬಂದು ಅಪ್ಪಳಿಸುವ ದೃಶ್ಯ ಗಮನ ಸೆಳೆಯುತ್ತದೆ. ಇಲ್ಲಿ ಶಿವಲಿಂಗದ ಜೊತೆಗೆ ನಂದಿಯ ವಿಗ್ರಹವೂ ಇದೆ. ಸಾಗರದ ಮಧ್ಯೆ ಇರುವ ಕಾರಣ ಈ ದೇವಾಲಯಕ್ಕೆ ಸಾಗರೇಶ್ವರ ಶಿವ ಮಂದಿರ ಎನ್ನಲಾಗುತ್ತಿದೆ.



### ತಲುಪುವುದು ಹೇಗೆ?

ವರ್ಷಪೂರ್ತಿ ತಂಪಾದ ವಾತಾವರಣ ಹೊಂದಿದ ಸಿಂಧುದುರ್ಗ ಪ್ರದೇಶಕ್ಕೆ ವಾಯು, ರಸ್ತೆ ಮತ್ತು ರೈಲು ಮಾರ್ಗವಾಗಿ ತಲುಪಬಹುದು. ಮಹಾರಾಷ್ಟ್ರದ ಬಹುತೇಕ ನಗರಗಳಿಂದ ಬಸ್ಸುಗಳ ಸೌಲಭ್ಯವಿದೆ. ರಾಷ್ಟ್ರೀಯ ಹೆದ್ದಾರಿ 17 ಈ ಪ್ರದೇಶದ ಮೂಲಕ ಹಾದು ಹೋಗುತ್ತದೆ. ಮುಂಬೈ, ಗೋವಾ ಮತ್ತು ಮಂಗಳೂರುಗಳಿಂದ ರೈಲು ಅಥವಾ ಬಸ್‌ನಲ್ಲಿ ಇಲ್ಲಿಗೆ ಸುಲಭವಾಗಿ ತಲುಪಬಹುದು. ಪಣಜಿ ಇಲ್ಲಿಂದ ಕೇವಲ 80 ಕಿ.ಮೀ ಅಂತರದಲ್ಲಿದ್ದು ಇದು ಸಿಂಧುದುರ್ಗಕ್ಕೆ ಹತ್ತಿರದ ವಿಮಾನ ನಿಲ್ದಾಣವಾಗಿದೆ.





